

ಫೋನಿನಲ್ಲಿ ಬಸವರಾಜನ ಮಗಳು ರೂಪಾ ಅಳುತ್ತಲೆ ಹೇಳಿದ್ದಳು: 'ಅಂಕಲ್, ಅಪ್ಪ ಯಾಕೋ ಒಂಥರಾ ಮಾಡಲಿಕ್ಕೆ ಹತ್ಯಾರ. ಊಟ ಮಾಡಿದ ಮ್ಯಾಲ ಎಸಿಡಿಟಿ ಅಂತ ವಾಂತಿ ಮಾಡಿಕೊಂಡ್ರು. ಎರಡುಮೂರು ಸಲ ವಾಂತಿ ಆತು. ಅವರಿಗೆ ನಿಲ್ಲಲಿಕ್ಕೆ ಆಗವಲ್ಲದು. ಎದಿ ಹಿಡಕೊಂಡು ಒದ್ಯಾಡದಂಗ ಮಾಡಲಿಕ್ಕೆ ಹತ್ಯಾರ. ನಮಗ ಬಾಳ ಹೆದರಿಕಿ ಆಗಲಿಕ್ಕೆ ಹತ್ತೇದ. ಕಾರ್ ತಗೊಂಡು ಬರ್ತಿರೇನು? ರಾತ್ರಿ ಬ್ಯಾರೆ ಆಗೇದ. ಯಾವದಾದ್ರೂ ದವಾಖಾನಿಗೆ ಹೋಗೋಣು? ನಾ ಬಾಳ ಹಾಸ್ಪಿಟಲ್‌ಗೆ ಫೋನ್ ಮಾಡಿದೆ. ಎಲ್ಲಾರೂ ಬೆಡ್ ಇಲ್ಲ ಅಂತ ಹೇಳಾಕಹತ್ಯಾರು. ಅವಳ ದುಃಖ ಉಮ್ಮಳಿಸುತ್ತಲೆ ಇತ್ತು. ಆಕೆ ಈ ರೀತಿ ಎಂದೂ ದುಃಖದಿಂದ ಮಾತಾಡಿದವಳಲ್ಲ. ಅವಳ ಬಿಕ್ಕುವಿಗೆಗೆ ನನ್ನ ಕಣ್ಣೂ ಮಂಜಾಯಿತು. ಅವಳಿಗೆ ಸಮಾಧಾನ ಹೇಳಲು ಯತ್ನಿಸಿದೆ: 'ಬಸಣ್ಣಗ ಅಸಿಡಿಟಿ ಯಾವಾಗ ಇಲ್ಲ? ಮುಂಜಾನಿ ತಪ್ಪಿದ್ರ ರಾತ್ರಿ, ರಾತ್ರಿ ತಪ್ಪಿದರೆ ಮುಂಜಾನೆ. ಒಟ್ಟೆನ್ಯಾಗ ಅಂವ ಚಾ ಕುಡಿಯೋದು ಬಿಡಂಗಿಲ್ಲ. ಗುಳಿಗಿ ನುಂಗೋದು ತಪ್ಪಿಸಂಗಿಲ್ಲ. ಈಗ ಒಂದು ಗುಳಿಗಿ ನುಂಗಿ, ಅಸಿಡಿಟಿ ಸಿರಪ್ ಕುಡಿ ಅಂತ ಹೇಳಮ್ಮ. ದವಾಖಾನಿಗೆ ಮುಂಜಾನಿ ಹೋದರಾತು.' ನಾನು ಮಾತಾಡುತ್ತಲೆ ಇದ್ದೆ. ಆ ಕಡೆಯಿಂದ ಅವಳು ಯಾವಾಗಲೋ ಫೋನ್ ಇಟ್ಟಿದ್ದಳು ಎನ್ನುವುದು ಆ ಕಡೆಯ ಟೋನ್ ಶಬ್ದ ಎಷ್ಟೋ ಹೊತ್ತಿನತನಕ ಕೇಳುತ್ತಲೆ ಇದ್ದಾಗ ಅರಿವಿಗೆ ಬಂದಿತು.

ಬಸವರಾಜನ ಆರೋಗ್ಯ ಸಮಸ್ಯೆ ದೊಡ್ಡ ಸಮಸ್ಯೆಯೇನೂ ಅನ್ನಿಸಲಿಲ್ಲ. ಯಾಕೆಂದರೆ ಆತ ಬಹಳಷ್ಟು ಸಲ ಈ ಹುಳಿತೇಗಿನ ಸಮಸ್ಯೆಯಿಂದ ಬಳಲುವವನೆ ಆಗಿದ್ದ. ಅದು ಜಾಸ್ತಿ ಚಹಾ ಕುಡಿಯುವುದರಿಂದ ಆಗುತ್ತದೆಯೆಂದು ಅವನು ಸೇರಿದಂತೆ ನಮಗೆಲ್ಲರಿಗೂ ಗೊತ್ತಿರುವಂತಹುದೇ ಆಗಿತ್ತು. ಎರಡು ತಾಸಿನ ಹಿಂದೆಯಷ್ಟೆ ಯುನಿವರ್ಸಿಟಿಯ ಉದ್ಯಾನವನದಲ್ಲಿ ಅವನೊಡನೆ ಮಾತಾಡಿ ಮನೆಗೆ ಬಂದಿದ್ದೆ. ಅಷ್ಟರಲ್ಲಿ ಜೀವ ಹಿಂಡುವ ಈ ಸುದ್ದಿ! ಎರಡು ಗಂಟೆಯ ಹಿಂದೆ ನಗುನಗುತ್ತ ಮಾತಾಡಿದವನು ಈಗ ಚಿರನಿದ್ರೆಗೆ ಜಾರಿದ್ದಾನೆ ಎಂದರೆ ಹೇಗೆ ನಂಬುವುದು? 'ಅಂಕಲ್ ನೀವು ಕರೆದ್ರ ಅಪ್ಪ ಓ ಅಂತಾನು. ಸ್ವಲ್ಪ ಜೋರಾಗಿ ಕರೀರಿ.' ಅಲ್ಲಿಗೆ ಹೋದ ಮೇಲೆ ರೂಪಾ ಚೀರುತ್ತಿದ್ದಳು. ಸ್ನೇಹಿತನ ಕರೆಗೆ ಯಾವಾಗಲೂ ಓಗೊಡುತ್ತಿದ್ದ ಬಸವರಾಜ ಈ ಸಲ ತನ್ನ ಜೀವಗೂಡಿನ ಬಾಗಿಲುಗಳನ್ನು ಭದ್ರಪಡಿಸಿಕೊಂಡೇ ಮಲಗಿದ್ದಾನೆ!

'ಶೇಕಣ್ಣ, ನಿನ್ನ ಜೋಡಿ ಸ್ವಲ್ಪ ಮಾತಾಡೋದೈತಿ. ನಾಳೆ ಸಂಜೀಕ ಮನೀ ಕಡೆ ಬರ್ತಿಯೇನು?' ನಿನ್ನೆಯಷ್ಟೆ ಆತ ಕೇಳಿದ್ದ. ಸ್ನೇಹಿತರೆದುರು ಚರ್ಚೆ ಮಾಡುವುದು ಅವನಿಗೆ ಬೇಕಾಗಿರಲಿಲ್ಲ. ಸೂಕ್ಷ್ಮವಾಗಿ ನಿರ್ವಹಿಸಬೇಕು ಎಂದಾತ ಆಲೋಚಿಸುತ್ತಿರಬೇಕು. ಈಗ ಅದೆಲ್ಲ ಬೇಡವೆಂದೇ ಹೊರಟುಹೋಗಿದ್ದಾನೆ! ಆತ ಯಾವುದಕ್ಕೆ ಕರೆಯುತ್ತಿದ್ದಾನೆ ಎಂಬುದನ್ನು ನಾನು ನನ್ನ ಬುದ್ಧಿ ಉಪಯೋಗಿಸಿ ಕಂಡುಕೊಳ್ಳಬೇಕಿತ್ತು. ಮಗಳು ಅಪ್ಪನ ಮಾತನ್ನು ಕೇಳಲಾರದವಳಾಗಿದ್ದಳು. ಹೇಗಾದರೂ ಮಾಡಿ ನಾನು ರೂಪಾಳನ್ನು ಒಪ್ಪಿಸಿಬೇಕೆಂಬುದು ಅವನ ಬಯಕೆಯಾಗಿತ್ತು. ಹೊಸ ಕೆಲಸದ ಪ್ರಲೋಭನೆಯಿಂದ, ರಾಜಕೀಯ ಪ್ರವೇಶದ ಅಭಿಲಾಷೆಯಿಂದ ಅವಳನ್ನು ಹೊರಗೆಳೆಯಬೇಕೆಂಬುದು ಅವನ ಇಚ್ಛೆಯಾಗಿತ್ತು. ಯಾವ ಮಾಯದ ಬಲೆಯಿಂದ ಆತ ಜೀವನಪೂರ್ತಿ ತಪ್ಪಿಸಿಕೊಳ್ಳುತ್ತ ಬಂದಿದ್ದನೋ ಅದರಲ್ಲಿ ಮಗಳು ಎಲ್ಲಿ ಸಿಗಿಬೀಳುವಳೋ ಎಂಬುದು ಅವನ ಆತಂಕವಾಗಿತ್ತು. ಆದರೆ ಮಗಳು ಹೇಳುವುದೇ ಬೇರೆಯಾಗಿತ್ತು. ಅಪ್ಪನದು ತಪ್ಪುಕಲ್ಪನೆ. ತಾನು ಏನಾದರೂ ಹೊಸದನ್ನು ಮಾಡುತ್ತೇನೆಂದರೆ ಸಾಕು, ಅದರ ಮೇಲೆ ಅಪ್ಪ ತಣ್ಣೀರು ಸುರಿಯುತ್ತಾನೆ ಎಂಬುದು ಅವಳ ಪ್ರತಿದೂರು. 'ಅಪ್ಪ, ಸುಮ್ಮಸುಮ್ಮನ ಹೆದರತಾರ. ಇದರಾಗ ಆತಂಕ ಪಡುವಂಥಾದ್ದು